ದಿನಾಂಕ಼ 20-01-2017 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ 2ನೇ ಪ್ರತಿವಾದಿ ಪರ ಶ್ರೀ ಟಿಎಸ್‌ಕೆ ವಕೀಲರಿಂದ ,

ನಾನು ಮೂಲತಃ ಬೈರಾಪೂರದ ವಾಸಿ. ನಾನು 20 ವರ್ಷದ ಹಿಂದೆ ಬೈರಪೂರದಿಂದ ಶಿರುಗುಪ್ಪಕ್ಕೆ ಬಂದೆ . ನನ್ನ ಉಪ ಜೀವನಕ್ಕೆ ನಾನು ಹೋಟೆಲ್ ನಡೆಸುತ್ತೇನೆ ಹಾಗೂ ಕೃಷಿಯು ಮಾಡುತ್ತೇನೆ. ನಾನು ದಾವಾ ಸಲ್ಲಿಸಿದ ನಂತರ ಶಿರುಗುಪ್ಪದಲ್ಲಿಯೇ ವಾಸ ಇದ್ದೆ. ಈಗ ಹಾಲೀ ನಾನು ಬಳ್ಳಾರಿಯಲ್ಲಿ ವಾಸ ಇದ್ದೇನೆ.

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಮ್ಮ ಮಾತೃಬಾಷೆ ಕನ್ನಡ . ನಿಪಿ1ನ್ನು ನಾನೇ ಇಂಜೀನಿಯರ್ ಬಳಿ ಮಾಡಿಸಿಕೊಂಡು ಬಂದೆ. ನಿಪಿ1 ಯಾವ ದಿನಾಂಕದಂದು ಮಾಡಿದೆ ಎಂದು ಹೇಳಲು ಆಗುವುದಿಲ್ಲ. ಕಟ್ಟಡ ಪರವಾನಿಗೆ 2012ರಲ್ಲಿ ನೀಡಿದರು ದಿನಾಂಕ ಗೊತ್ತಿಲ್ಲ. ನಿಪಿ4 ರಿಂದ 9 ಪೋಟೋಗಳನ್ನು ನಾನೇ ಹೊರಗಡೆ ನಿಂತು ತೆಗೆಸಿದ್ದೇನೆ. ನಮ್ಮ ಮನೆ ಸ್ವಾಧೀನದಲ್ಲಿರುವ ಬಗ್ಗೆ ನ್ಯಾಯಾಲಯಕ್ಕೆ ತೋರಿಸಲು ಸದರಿ ಪೋಟೋಗಳನ್ನು ತೆಗೆಸಿದ್ದೆ. ನಿಪಿ7 ರಲ್ಲಿ ಮಾತ್ರ ದಿನಾಂಕ ಇದೆ ಹಾಗೂ ಇನ್ನುಳಿದ ಪೋಟೋಗಳಲ್ಲಿ ದಿನಾಂಕ ಇಲ್ಲ ಎಂದರೆ ಸರಿ . ಪೋಟೋಗಳನ್ನು ಮನೆಯ ಒಳಗಡೆ ನಿಂತು ತೆಗೆಸಿಕೊಳ್ಳಲು ನಿಮಗೇನು ತೊಂದರೆ ಇತ್ತು ಎಂದು ಕೇಳಿದ ಪ್ರಶ್ನೆಗೆ ಆಂತ್ತಿಗೆ ಅವರು ದಾಖಲೆಗಳೆಲ್ಲಾವನ್ನು ಸೃಷ್ಟಿಸಿಕೊಂಡಿದ್ದರು ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ಪೋಟೋಗಳನ್ನು ಯಾವ ದಿನಾಂಕದಂದು ಯಾರು ತೆಗೆದರು ಎಂದು ಹೇಳಲು ಆಗುವುದಿಲ್ಲ. ನಿಪಿ10 ರಲ್ಲಿ ಹಣ ಮುಟ್ಟಿವೆ ಎಂದು ಹೇಳಿರುವ ಅಂಶ ಸುಳ್ಳು. ನಾನು ಎಲ್ಲಾ ದಾಖಲೆಗಳಿಗೆ ಹೆಬ್ಬಟ್ಟು ಒತ್ತುತ್ತೇನೆ. ಯಾವುದಾದರು ಒಂದೊಂದು ದಾಖಲೆಗಳಿಗೆ ಸಹಿಯು ಮಾಡಿದ್ದೇನೆ. ನನ್ನ ಸಹಿ ನೋಡಿದರೆ ಗುರ್ತಿಸುತ್ತೇನೆ. ನಿಪಿ10(ಎ) ನನ್ನ ಸಹಿ ಎಂದರೆ ಸರಿ . ನಿಪಿ9ರಲ್ಲಿರುವ ಹೆಬ್ಬಟ್ಟುಗಳು ನನ್ನವೇ ಅಂದರೆ ಸರಿ . ನಿಪಿ11ಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ಉದ್ದೇಶಪೂರ್ವಕವಾಗಿ ಕೆಲವು ದಾಖಲೆಗಳಿಗೆ ಹೆಬ್ಬಟ್ಟು, ಇನ್ನು ಕೆಲವು ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ17 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

ನಾನು ಬ್ಯಾಂಕಿಗೆ ಸಾಲ ಕೇಳಲು ಹೋಗಿದ್ದೆ. ಆದರೆ ಅಲ್ಲಿ ಸಮಯ ಹೆಚ್ಚಿಗೆ ಆಗುತ್ತದೆ ನಾನು ತೆಗೆದುಕೊಂಡಿಲ್ಲ. ಸ್ವತ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳು ಸರಿ ಇಲ್ಲ ಎಂದು ನನಗೆ ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ20ರ ಪ್ರಕಾರ ಸ್ವತ್ತಿನ ವಿಸ್ತೀರ್ಣ ಹೆಚ್ಚಿಗೆ ಇರುವುದರಿಂದ ಸಾಲ ಕೊಡುವುದಿಲ್ಲ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ 2012 ರಲ್ಲಿ ನಾನು ಮನೆ ಕಟ್ಟಲು ಆರಂಭಿಸಿದೆ ದಿನಾಂಕ ಗೊತ್ತಿಲ್ಲ. ಕಟ್ಟಡಕ್ಕೆ ಒಟ್ಟು ಖರ್ಚು 20 ಲಕ್ಷ ರೂ.ಗಳು ಖರ್ಚಾಗಿದೆ. ನಾನು ಹಾಜರುಪಡಿಸಿರುವ

ದಾಖಲೆಗಳಲ್ಲಿ ಅಂದರೆ ನಿಪಿ9 ರಿಂದ 11 ಮತ್ತು 53 ರಲ್ಲಿ ದಾವಾ ಸ್ವತ್ತು ಕೇವಲ ಖಾಲಿ ನಿವೇಶನ ಎಂದು ಇದೆ ಮನೆ ಎಂದು ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ30 ರಿಂದ 52 ಬಿಲ್‌ಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರುತ್ತಾರೆ. ಕಾಲಾವಕಾಶ ನೀಡಲಾಯಿತು.)**

**(ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಓ ಹೇ ಕೇ ಸರಿ ಆದೆ ,

ಸಿನಿಯರ್ ಸಿವಿಲ್ ನ್ಯಾಯಾಧೀಶರು ,ಶಿರುಗುಪ್ಪ